**ಬ್ಯಾಂಕುಗಳಿಂದ ಸ್ಮಾರ್ಟ್ ಕಾರ್ಡುಗಳ ನೀಡಿಕೆ**

ಡಿಬಿಒಡಿ. ಸಂಖ್ಯೆ. ಎಫ್‌ಎಸ್‌ಸಿ.ಬಿಸಿ.88/24.01.011ಎ/2001-02 ಏಪ್ರಿಲ್ 11, 2002

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು,
(ಆರ್‌ಆರ್‌ಬಿಗಳನ್ನು ಹೊರತುಪಡಿಸಿ)

ಮಾನ್ಯರೇ,

**ಬ್ಯಾಂಕುಗಳಿಂದ ಸ್ಮಾರ್ಟ್ ಕಾರ್ಡುಗಳ ನೀಡಿಕೆ**

ಸುತ್ತೋಲೆ ಡಿಬಿಒಡಿ.ಸಂಖ್ಯೆ.ಎಫ್‌ಎಸ್‌ಸಿ.ಬಿಸಿ 123/24.01.019/99-2000 ದಿನಾಂಕ 12ನೇ ನವೆಂಬರ್ 1999 ರಲ್ಲಿ (ಅನುಬಂಧ-1, ಬಾಬು 3-ಗ್ರಾಹಕರುಗಳ ಅರ್ಹತೆ) ಒಳಗೊಂಡಿರುವ ಸೂಚನೆಗಳ ಅನ್ವಯ, , ಇತರ ವಿಷಯಗಳ ಜೊತೆಗೆ, ಉತ್ತಮ ಹಣಕಾಸು ಸ್ಥಿರತೆಯನ್ನು ಹೊಂದಿರುವ ಮತ್ತು ಕಳೆದ ಆರು ತಿಂಗಳ ಅವಧಿಯಲ್ಲಿ ಖಾತೆಗಳನ್ನು ತೃಪ್ತಿಕರವಾಗಿ ನಿರ್ವಹಿಸಿರುವ ತಮ್ಮ ಗ್ರಾಹಕರಿಗೆ ಸ್ಮಾರ್ಟ್/ಡೆಬಿಟ್ ಕಾರ್ಡುಗಳನ್ನು ನೀಡುವಂತೆ ಬ್ಯಾಂಕುಗಳಿಗೆ ಸೂಚಿಸಲಾಗಿತ್ತು.

2. ಇದನ್ನು ಪುನರ್ ಪರಿಶೀಲಿಸಿದ ನಂತರ ಉತ್ತಮ ಹಣಕಾಸು ಸ್ಥಿರತೆ ಹೊಂದಿರುವ ಆಯ್ದ ಗ್ರಾಹಕರು ಆರು ತಿಂಗಳುಗಳಿಗಿಂತ ಕಡಿಮೆ ಅವಧಿ ಬ್ಯಾಂಕುಗಳಲ್ಲಿ ಖಾತೆಗಳನ್ನು ನಿರ್ವಹಿಸಿದ್ದರೂ ಸಹ, ಸುತ್ತೋಲೆ ಸಂಖ್ಯೆ ಡಿಬಿಎಸ್.ಎಫ್‌ಜಿವಿ.ಬಿಸಿ.56/23.04.001/98-99 ದಿನಾಂಕ 21ನೇ ಜೂನ್ 1999ರ ಮೂಲಕ ಬ್ಯಾಂಕಿಗೆ ರವಾನಿಸಲಾಗಿರುವ ಭಾರೀ ಮೌಲ್ಯದ ಬ್ಯಾಂಕು ವಂಚನೆಗಳ ಬಗೆಗಿನ ಅಧ್ಯಯನ ತಂಡದ ವರದಿಯ ಪ್ಯಾರಾ 9.2 ರಲ್ಲಿ ಗೊತ್ತುಪಡಿಸಿರುವಂತೆ "ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ", ಪರಿಕಲ್ಪನೆಯ ಅನುಷ್ಠಾನವನ್ನು ಅವರು ಖಚಿತಪಡಿಸಿಕೊಳ್ಳುವುದಕ್ಕೆ ಒಳಪಟ್ಟು ಅಂಥ ಆಯ್ದ ಗ್ರಾಹಕರಿಗೆ ಬ್ಯಾಂಕುಗಳು ಸ್ಮಾರ್ಟ್ ಕಾರ್ಡುಗಳನ್ನು (ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ) ನೀಡಬಹುದೆಂದು ನಿರ್ಧರಿಸಲಾಗಿದೆ. ಆದಾಗ್ಯೂ, ಡೆಬಿಟ್ ಕಾರ್ಡುಗಳ ಆಫ್ ಲೈನ್ ವ್ಯವಹಾರ ವಿಧಾನವನ್ನು ಜಾರಿಗೆ ತರುತ್ತಿರುವ ಬ್ಯಾಂಕುಗಳು ಆರು ತಿಂಗಳ ಅವಧಿ ಖಾತೆಗಳನ್ನು ತೃಪ್ತಿಕರವಾಗಿ ನಿರ್ವಹಿಸಬೇಕಾದ ಕನಿಷ್ಠ ಅವಧಿಯನ್ನು ತಪ್ಪದೆ ಪಾಲಿಸತಕ್ಕದ್ದು.

3. ಲಗತ್ತಿಸಿರುವ ಸ್ಲಿಪ್ ಪ್ರಕಾರ, ಸೂಚನೆಗಳ ಕೈಪಿಡಿ, ಸಂಪುಟ-I-ಭಾಗ II (ಜೂನ್ 30, 2000 ದವರೆಗೆ ಪರಿಷ್ಕರಿಸಿರುವ 15ನೇ ಅಧ್ಯಾಯದ 15.11 ನೇ ಪ್ಯಾರಾದ ಅನುಬಂಧ- I ರ 3ನೇ ಬಾಬಿಗೆ ತತ್ಪರಿಣಾಮವಾದ ತಿದ್ದುಪಡಿಯನ್ನು ದಯವಿಟ್ಟು ಮಾಡತಕ್ಕದ್ದು.

4. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

**(ಸಿ.ಆರ್. ಮುರುಳೀಧರನ್)**
ಮುಖ್ಯ ಪ್ರಧಾನ ವ್ಯವಸ್ಥಾಪಕರು.

ಸ್ಲಿಪ್
[ಸೂಚನೆಗಳ ಕೈಪಿಡಿ–ಡಿಬಿಒಡಿ. ಡಿಬಿಎಸ್ ಮತ್ತು ಐಇಸಿಡಿ–
ಎಫ್ಎಸ್ಸಿ.ಬಿಸಿ.88/2002]

**ಅನುಬಂಧ–1**
**(ಪ್ಯಾರಾ 15.11)**

**3. ಗ್ರಾಹಕರ ಅರ್ಹತೆ**

2. ಉತ್ತಮ ಹಣಕಾಸು ಸ್ಥಿರತೆ ಹೊಂದಿರುವ ಆಯ್ದ ಗ್ರಾಹಕರು ಆರು ತಿಂಗಳುಗಳಿಗಿಂತ ಕಡಿಮೆ ಅವಧಿ ಬ್ಯಾಂಕುಗಳಲ್ಲಿ ಖಾತೆಗಳನ್ನು ನಿರ್ವಹಿಸಿದ್ದರೂ ಸಹ, ಸುತ್ತೋಲೆ ಸಂಖ್ಯೆ ಡಿಬಿಎಸ್ ಎಫ್ ಜಿ ವಿ ಬಿ ಸಿ 56/23.04.001/98–99 ದಿನಾಂಕ 21ನೇ ಜೂನ್ 1999ರ ಮೂಲಕ ಬ್ಯಾಂಕಿಗೆ ರವಾನಿಸಲಾಗಿರುವ ಭಾರೀ ಮೌಲ್ಯದ ಬ್ಯಾಂಕು ವಂಚನೆಗಳ ಬಗೆಗಿನ ಅಧ್ಯಯನ ತಂಡದ ವರದಿಯ ಪ್ಯಾರಾ 9.2 ರಲ್ಲಿ ಗೊತ್ತುಪಡಿಸಿರುವಂತೆ "ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ", ಪರಿಕಲ್ಪನೆಯ ಅನುಷ್ಠಾನವನ್ನು ಅವರು ಖಚಿತಪಡಿಸಿಕೊಳ್ಳುವುದಕ್ಕೆ ಒಳಪಟ್ಟು ಅಂಥ ಆಯ್ದ ಗ್ರಾಹಕರಿಗೆ ಬ್ಯಾಂಕುಗಳು ಸ್ಮಾರ್ಟ್ ಕಾರ್ಡುಗಳನ್ನು (ಆನ್ ಲೈನ್ ಮತ್ತು ಆಫ್ ಲೈನ್ ಎರಡೂ) ನೀಡಬಹುದೆಂದು ನಿರ್ಧರಿಸಲಾಗಿದೆ. ಆದರೆ, ಡೆಬಿಟ್ ಕಾರ್ಡುಗಳ ಆಫ್ ಲೈನ್ ವ್ಯವಹಾರದ ವಿಧಾನವನ್ನು ಜಾರಿಗೆ ತರುತ್ತಿರುವ ಬ್ಯಾಂಕುಗಳು ಆರು ತಿಂಗಳ ಅವಧಿ ಖಾತೆಗಳನ್ನು ತೃಪ್ತಿಕರವಾಗಿ ನಿರ್ವಹಿಸಬೇಕಾದ ಕನಿಷ್ಠ ಅವಧಿಯನ್ನು ತಪ್ಪದೆ ಪಾಲಿಸತಕ್ಕದ್ದು. ವ್ಯಕ್ತಿಗಳು, ಕಾರ್ಪೋರೇಟ್ ಸಂಸ್ಥೆಗಳು ಮತ್ತು ಫರ್ಮ್‌ಗಳು ನಿರ್ವಹಿಸಿರುವ ಅಂತರ್ಗತ ಸಾಲ ತೀರಿಕೆ ಗುಣಲಕ್ಷಣಗಳನ್ನು ಹೊಂದಿರುವಂಥ ಉಳಿತಾಯ ಖಾತೆ/ ಚಾಲ್ತಿ ಖಾತೆ/ನಿಗದಿತ ಠೇವಣಿ ಖಾತೆಗಳನ್ನು ಹೊಂದಿರುವಂಥವರಿಗೂ ಬ್ಯಾಂಕುಗಳು ಸ್ಮಾರ್ಟ್‌ಕಾರ್ಡ್/ಡೆಬಿಟ್ ಕಾರ್ಡ್ ಸೌಲಭ್ಯವನ್ನು ವಿಸ್ತರಿಸಬಹುದು. ಸ್ಮಾರ್ಟ್‌ಕಾರ್ಡ್/ಡೆಬಿಟ್ ಕಾರ್ಡ್ ಸೌಲಭ್ಯವನ್ನು ನಗದು ಸಾಲ/ ಸಾಲ ಖಾತೆಧಾರಕರಿಗೆ ವಿಸ್ತರಿಸತಕ್ಕದ್ದಲ್ಲ. ಆದರೆ, ಬ್ಯಾಂಕುಗಳು ಚೆಕ್ ಮೂಲಕ ವ್ಯವಹಾರಗಳನ್ನು ನಡೆಸಲು ಅನುಮತಿಸಲಾಗಿರುವಂಥ ವೈಯಕ್ತಿಕ ಸಾಲ ಖಾತೆಗಳಿಗೆ ಪ್ರತಿಯಾಗಿ ಆನ್ ಲೈನ್ ಡೆಬಿಟ್ ಕಾರ್ಡುಗಳನ್ನು ನೀಡಬಹುದು.